**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.1571/2023**

| | | |
|---|---|---|
| ಸಾಕ್ಷಿದಾರರ ಹೆಸರು | : ವಿಜಯಲಕ್ಷ್ಮೀ ಪೈ | ಪ್ರಾಸಾ-7 |
| ಗಂಡನ ಹೆಸರು | : ಡಾ.ಉಮೇಶ್ ಭಟ್ | ಚಾಸಾ-31 |
| ವಯಸ್ಸು | : 49 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪ್ರಸೂತಿ ತಜ್ಞರು | ದಿನಾಂಕಃ 17.07.2026. |
| ವಾಸಸ್ಥಳ | : ಚಿಕ್ಕಮಗಳೂರು, ಜಿಲ್ಲಾ ಆಸ್ಪತ್ರೆ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

ನಾನು ಜುಲೈ 2015 ರಿಂದ ಜುಲೈ 2025 ರವರೆಗೂ ಪ್ರಸೂತಿ ತಜ್ಞರಾಗಿ ಮೂಡಿಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.07.09.2022 ರಂದು ಮದ್ಯ ರಾತ್ರಿ 12.00 ರ ಸಮಯಕ್ಕೆ ಚಾಸಾ-28 ರವರನ್ನು ಸಾರ್ವಜನಿಕರು ಚಿಕಿತ್ಸೆಗೆಂದು ಆಸ್ಪತ್ರೆಗೆ ಕರೆದುಕೊಂಡು ಬಂದಿರುತ್ತಾರೆ. ಸದರಿಯವರಿಗೆ ಗಣಪತಿ ಕಾರ್ಯಕ್ರಮದಲ್ಲಿ ವಿದ್ಯುತ್ ತಾಕಿದ ಕಾರಣ ಕರೆದುಕೊಂಡು ಬಂದಿರುವುದಾಗಿ ತಿಳಿಸಿರುವುದಾಗಿ, ಸದರಿಯವರನ್ನು ಪರೀಕ್ಷಿಸಲಾಗಿ ಅವರ ಮೈ ಮೇಲೆ ಯಾವುದೇ ಗಾಯಗಳು ಕಂಡುಬಂದಿರುವುದಿಲ್ಲ. ಅದೇ ಸಮಯದಲ್ಲಿ ಚಾಸಾ-25 ರವರನ್ನು ಕರೆದುಕೊಂಡು ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಸದರಿಯವರ ಮೈ ಮೇಲೂ ಯಾವುದೇ ಗಾಯಗಳು ಇರುವುದು ಕಂಡುಬಂದಿರುವುದಿಲ್ಲ. ಅದೇ ಸಮಯದಲ್ಲಿ ಗೌರಿ ಎಂಬುವವರನ್ನು ಕರೆದುಕೊಂಡು ಬಂದಿದ್ದು, ಅವರನ್ನು ಪರೀಕ್ಷಿಸಲಾಗಿ ಸದರಿಯವರ ಮೈ ಮೇಲೂ ಯಾವುದೇ ಗಾಯಗಳು ಇರುವುದು ಕಂಡುಬಂದಿರುವುದಿಲ್ಲ.

ಸಾಕ್ಷಿಯು ದಿ.31.05.2023 ರಂದು ನೀಡಿದ ಗಾಯದ ಪ್ರಮಾಣ ಪತ್ರಗಳು ಮತ್ತು ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-15 ರಿಂದ 17, ಸಾಕ್ಷಿಯ ಸಹಿಯನ್ನು ನಿಪಿ-15(ಎ) ರಿಂದ 17(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಪಿ.ಕೆ. ವಕೀಲರಿಂದಃ**

ದಿ.07.09.2022 ರಂದು ಚಾಸಾ-25, 28 ಮತ್ತು ಗೌರಿ ಎಂಬುವವರನ್ನು ನನ್ನ ಬಳಿ ಆಸ್ಪತ್ರೆಗೆ ವಿದ್ಯುತ್ ಅವಗಡದಿಂದ ಚಿಕಿತ್ಸೆಗೆಂದು ಕರೆದುಕೊಂಡು ಬಂದಿದ್ದ ವಿಷಯ ಸುಳ್ಳು ಎಂದರೆ ಸರಿಯಲ್ಲ. ಅದೇ ದಿನ ನಾನು ಸದರಿಯವರನ್ನು ಪರೀಕ್ಷಿಸಿ ವರದಿಯನ್ನು ನೀಡಿದ್ದೆ ಎಂದು ಹೇಳಿದ ವಿಷಯ ಸುಳ್ಳು ಎಂದರೆ ಸರಿಯಲ್ಲ. ಸಾಮಾನ್ಯವಾಗಿ ವಿದ್ಯುತ್ ಶಕ್ತಿಯು ತಾಕಿದ ಕಾರಣ ಸುಟ್ಟು ಹೋದ ರೀತಿಯಲ್ಲಿ ಮತ್ತು ಕಪ್ಪು ಬಣ್ಣದ ಗಾಯಗಳು ಆಗುವಂತಹ ಸಾದ್ಯತೆ ಇರುವುದಿಲ್ಲ. ಚಾಸಾ-25, 28 ಮತ್ತು ಗೌರಿ ಎಂಬುವವರನ್ನು ಪರೀಕ್ಷಿಸಲಾಗಿ ಅಂತಹ ಯಾವುದೇ ಗಾಯಗಳು ಕಂಡುಬಂದಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**2 ನೇ ಆರೋಪಿಪರ ವಕೀಲರು 1 ನೇ ಆರೋಪಿಪರ ವಕೀಲರು ಮಾಡಿದ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುವುದಾಗಿ ನುಡಿದಿರುತ್ತಾರೆ.**

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.